**ಕರ್ನಾಟಕ ಸರ್ಕಾರ**

ಸಂ: ಲೋಇ:93: ಐಎಫ್ಎ:2010

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು:ದಿನಾಂಕ:20-04-2010

ಇವರಿಂದ,
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಲೋಕೋಪಯೋಗಿ, ಬಂದರು ಮತ್ತು
ಒಳನಾಡು ಜಲಸಾರಿಗೆ ಇಲಾಖೆ. ಬೆಂಗಳೂರು.

ಇವರಿಗೆ,

1. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡ (ದ) ಬೆಂಗಳೂರು.
2. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡ (ಉ) ಧಾರವಾಡ.

ಮಾನ್ಯರೆ,

ವಿಷಯ:- ಲೆ.ಶೀ.3054-(ಯೋಜನೇತರ) ರಸ್ತೆ ಮತ್ತು ಸೇತುವೆಗಳ ನಿರ್ವಹಣೆ ಹಾಗೂ ಲೆ.ಶೀ.3054-(ಯೋಜನೆ) ರಾಜ್ಯ ಹೆದ್ದಾರಿಗಳ ನಿರ್ವಹಣೆಯಡಿ ಕಾಮಗಾರಿಗಳ ಕ್ರಿಯಾ ಯೋಜನೆಯನ್ನು ತಯಾರಿಸುವ ಕುರಿತು

2010-11 ನೇ ಸಾಲಿಗೆ ಇಲಾಖೆಗೆ ಲೆ.ಶೀ.3054- (ಯೋಜನೇತರ) ರಸ್ತೆ ಮತ್ತು ಸೇತುವೆಗಳ ನಿರ್ವಹಣೆಯಡಿ ಮತ್ತು ಲೆ.ಶೀ.3054-(ಯೋಜನೆ) ರಾಜ್ಯ ಹೆದ್ದಾರಿಗಳ ನಿರ್ವಹಣೆಯಡಿ ಎರಡೂ ವಲಯಗಳ ವ್ಯಾಪ್ತಿಯಲ್ಲಿ ಬರುವ ಜಿಲ್ಲಾ ಮುಖ್ಯ ರಸ್ತೆಗಳ ಹಾಗೂ ರಾಜ್ಯಹೆದ್ದಾರಿಗಳ ಉದ್ದವನ್ನಾಧರಿಸಿ ಕ್ರಿಯಾ ಯೋಜನೆಯನ್ನು ತಯಾರಿಸುವ ಸಲುವಾಗಿ ಈ ಕೆಳಕಂಡಂತೆ ಅನುದಾನವನ್ನು ಹಂಚಿಕೆ ಮಾಡಲಾಗಿದೆ. ಹಂಚಿಕೆಯ ವಿವರ ಕೆಳಕಂಡಂತಿದೆ.

(ರೂ.ಲಕ್ಷಗಳಲ್ಲಿ )

| ವಲಯ | ಲೆ.ಶೀ.3054-04-800-1-01-200(ಯೋಜನೇತರ) ರಸ್ತೆ ಮತ್ತು ಸೇತುವೆಗಳ ನಿರ್ವಹಣೆಯಡಿ | | ಲೆ.ಶೀ.3054-03-337-0-05 (ಯೋಜನೆ) ರಾಜ್ಯ ಹೆದ್ದಾರಿಗಳ ನಿರ್ವಹಣೆ | |
|---|---|---|---|---|
| | ಜಿಲ್ಲಾ ಮುಖ್ಯ ರಸ್ತೆಗಳ ಉದ್ದ (ಕಿಮೀಗಳಲ್ಲಿ) | ಹಂಚಿಕೆ ಮಾಡಬಹುದಾದ ಅನುದಾನ (ಕಿಮೀಗೆ ರೂ.19282ಗಳಂತೆ) | ರಾಜ್ಯ ಹೆದ್ದಾರಿಗಳ ಉದ್ದ (ಕಿಮೀಗಳಲ್ಲಿ) | ಹಂಚಿಕೆ ಮಾಡಬಹುದಾದ ಅನುದಾನ (ಕಿಮೀಗೆ ರೂ.1896ಗಳಂತೆ) |
| ದಕ್ಷಿಣ | 28235 | 5444.25 | 9180 | 1740.28 |
| ಉತ್ತರ | 23627 | 4555.75 | 11920 | 2259.72 |
| ಒಟ್ಟು:- | **51862** | **10000.00** | **21100** | **4000.00** |

---- 2

ಮೇಲೆ ವಿವರಿಸಲಾಗಿರುವಂತೆ ತಮ್ಮ ವಲಯಗಳ ವ್ಯಾಪ್ತಿಯಲ್ಲಿ ಬರುವ ಜಿಲ್ಲಾ ಮುಖ್ಯ ರಸ್ತೆಗಳಲ್ಲಿ ಹಾಗೂ ರಾಜ್ಯ ಹೆದ್ದಾರಿಗಳಲ್ಲಿ ಹಿಂಗಾರು ಮತ್ತು ಮುಂಗಾರು ಮಳೆಗಾಲಗಳಲ್ಲಿ ರಸ್ತೆ ನಿರ್ವಹಣೆಗಾಗಿ (Routine Maintenance) ಮತ್ತು ಗುಂಡಿಮುಚ್ಚುವ ಕಾಮಗಾರಿಗಳಿಗಾಗಿ ಲೆ.ಶೀ.3054-04-800-1-01-200(ಯೋಜನೇತರ)ದಡಿ ಜಿಲ್ಲಾ ಮುಖ್ಯ ರಸ್ತೆಗಳಿಗಾಗಿ ಪ್ರತಿ ಕಿಮೀಗೆ ರೂ.19282.00ಗಳಂತೆ ಮತ್ತು ಲೆ.ಶೀ.3054-03-337-0-05(ಯೋಜನೆ) ರಾಜ್ಯ ಹೆದ್ದಾರಿಗಳ ನಿರ್ವಹಣೆಯಡಿ ಪ್ರತಿ ಕಿಮಿಗೆ ರೂ.1896.00ಗಳಂತೆ ಅನುದಾನವನ್ನು ಹಂಚಿಕೆ ಮಾಡಲಾಗಿದೆ. ಇದರನ್ವಯ ಎರಡೂ ಲೆಕ್ಕ ಶೀರ್ಷಿಕೆಗಳಡಿ ತಮ್ಮ ವಲಯಕ್ಕೆ ಹಂಚಿಕೆ ಮಾಡಲಾಗಿರುವ ಅನುದಾನಕ್ಕನುಗುಣವಾಗಿ ಕಾಮಗಾರಿಗಳ ಕ್ರಿಯಾ ಯೋಜನೆಯನ್ನು ಕೆಳಕಂಡ ಮಾರ್ಗಸೂಚಿಗಳನ್ವಯ ತಯಾರಿಸಿ ದಿ:26-04-2010ರೊಳಗಾಗಿ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

**ಈ ಕಾಮಗಾರಿಗಳ ಕ್ರಿಯಾ ಯೋಜನೆಯನ್ನು ಕೆಳಕಂಡ ಮಾರ್ಗಸೂಚಿಗಳನ್ವಯ ರೂಪಿಸತಕ್ಕದ್ದು.**

1. ರಸ್ತೆಗಳ ಉದ್ದವನ್ನು ಆಧರಿಸಿ ಅನುದಾನವನ್ನು ಹಂಚಿಕೆ ಮಾಡಿ ಈ ಹಂಚಿಕೆಗನುಗುಣವಾಗಿ ಮುಂಗಾರು ಮಳೆಗಾಲ ಹಾಗೂ ಹಿಂಗಾರು ಮಳೆಗಾಲವನ್ನು ಗಮನದಲ್ಲಿಟ್ಟುಕೊಂಡು 1:1 ಅನುಪಾತದಲ್ಲಿ ಕಾಮಗಾರಿಗಳ ಕ್ರಿಯಾ ಯೋಜನೆಯನ್ನು ತಯಾರಿಸತಕ್ಕದ್ದು.

2. ರಸ್ತೆಗಳಲ್ಲಿನ ಗುಂಡಿಮುಚ್ಚುವ ಹಾಗೂ ನಿರ್ವಹಣೆ(Routine Maintenance)ಕಾಮಗಾರಿಗಳನ್ನು ಆದ್ಯತೆ ಮೇಲೆ ಕೈಗೊಳ್ಳತಕ್ಕದ್ದು.

3. ರಸ್ತೆಗಳನ್ನು ಆಯ್ಕೆ ಮಾಡುವಾಗ ಈ ರಸ್ತೆಗಳು ಇತರ ಯಾವುದೇ ಯೋಜನೆಗಳಡಿ ಸೇರ್ಪಡೆಗೊಂಡಿರುವುದಿಲ್ಲವೆಂಬುದನ್ನು ಖಚಿತಪಡಿಸಿಕೊಳ್ಳತಕ್ಕದ್ದು.

ತಮ್ಮ ನಂಬುಗೆಯ,

(ಎನ್.ಲಕ್ಷ್ಮಣರಾವ್ ಪೇಶ್ವೆ) 19/4

ಸರ್ಕಾರದ ಕಾರ್ಯದರ್ಶಿ,

ಲೋಕೋಪಯೋಗಿ, ಬಂದರು ಮತ್ತು

ಒಳನಾಡು ಜಲಸಾರಿಗೆ ಇಲಾಖೆ